

بسم اللهِ الرّحمٰنِ الرّحيم

# ವಕ್ಫೇ ಜದೀದ್ ಹೊಸ ವರ್ಷದ ಆರಂಭ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **08-01-2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಇಲ್‌ಹಾಮ್ ಹೀಗಿದೆ: **ಲಾ ಇಲಾಹ ಇಲ್ಲಾ ಅನ ಫತ್ತಖಿಝೂನೀ ವಕೀಲಾ.** ನನ್ನ ಹೊರತು ಬೇರೆ ದೇವನಿಲ್ಲ. ನೀನು ನನ್ನನ್ನೇ ನಿನ್ನ ಕಾರ್ಯ ನಿರ್ವಾಹಕನನ್ನಾಗಿ ಮಾಡು. ಈ ಇಲ್‌ಹಾಮ್ ಮೂಲಕ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ಹೀಗೆ ಸಾಂತ್ವನ ನೀಡಿದನು. ನೀನು ಬೇರೆ ಕಡೆಗೆ ನೋಡುವ ಆವಶ್ಯಕತೆ ಇಲ್ಲ. ನಿನ್ನ ಎಲ್ಲ ಕೆಲಸಗಳನ್ನು ನಾನು ಮಾಡಿಕೊಡುವೆನು. ನಿನ್ನ ಕೆಲಸಗಳನ್ನು ನಾನೇ ಚಲಾಯಿಸುವೆನು. ನಾನೇ ಆ ಕೆಲಸಗಳ ಮೇಲ್ವಿಚಾರಣೆ ನಡೆಸುವೆನು. ನಾನೇ ಆ ಕೆಲಸಗಳಿಗೋಸ್ಕರ ಸಾಧನ ಸಂಪತ್ತುಗಳನ್ನು ಒದಗಿಸುವೆನು. ನೀನು ನನ್ನನ್ನು ಆರಾಧ್ಯನನ್ನಾಗಿ ಮಾಡಿರುವಾಗ ಮತ್ತು ನಾನು ನಿನ್ನನ್ನು ಧರ್ಮದ ಪ್ರಚಾರಕ್ಕೋಸ್ಕರ ನೇಮಿಸಿರುವಾಗ, ಯಾವುದೇ ರೀತಿಯಲ್ಲಿ ಗಾಬರಿಗೊಳ್ಳುವುದರ ಆವಶ್ಯಕತೆ ಇಲ್ಲ. ನಾನೇ ನಿನ್ನ ಎಲ್ಲ ಕೆಲಸಗಳನ್ನು ಸರಿಯಾಗಿ ಮಾಡುವ ಶಕ್ತಿಯನ್ನು ಹೊಂದಿದ್ದೇನೆ. ನಾನೇ ಅವುಗಳನ್ನು ಸರಿಯಾಗಿ ಮಾಡಿಕೊಡುವೆನು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಇಲ್‌ಹಾಮ್ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿರುವರು: ಅಲ್ಲಾಹನು ಹೇಳಿದ್ದಾನೆ: ನಾನೇ ಎಲ್ಲ ಕೆಲಸಗಳ ಕಾರ್ಯನಿರ್ವಾಹಕನಾಗಿದ್ದೇನೆ. ನೀನು ನನ್ನನ್ನೇ ವಕೀಲ್ (ಕಾರ್ಯನಿರ್ವಾಹಕ) ಆಗಿ ತಿಳಿದುಕೊಳ್ಳು. ನಿನ್ನ ಕೆಲಸಗಳಲ್ಲಿ ಬೇರೆ ಯಾರಾದರೂ ಪಾತ್ರ ವಹಿಸುವುದಾಗಿ ಭಾವಿಸಬೇಡ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಈ ಇಲ್‌ಹಾಮ್‌ನಿಂದ ನನಗೆ ಭಯ ಉಂಟಾಯಿತು. ನನ್ನ ಹೃದಯದಲ್ಲಿ ಆತಂಕ ತಲೆದೋರಿತು. ಪ್ರಾಯಶಃ ಅಲ್ಲಾಹನ ದೃಷ್ಟಿಯಲ್ಲಿ ನನ್ನ ಜಮಾಅತ್ ಕೆಲಸ ಮಾಡಲು ಯೋಗ್ಯತೆ ಗಳಿಸಿರದ ಕಾರಣ ಅಲ್ಲಾಹನೇ ಸ್ವತಃ ಈ ಕೆಲಸ ತನ್ನ ಕೈಗೆತ್ತಿಕೊಂಡಿರುವನೇ ಎಂದು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಈ ಇಲ್‌ಹಾಮ್ ಹೀಗೆ ಸೂಚಿಸುತ್ತದೆ ಎಂದು ನಮ್ಮ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ನೆನಪಿಟ್ಟುಕೊಳ್ಳಬೇಕು: ಅಲ್ಲಾಹನಿಗೆ ನಿಮ್ಮ ಸೇವೆಯ ಆವಶ್ಯಕತೆ ಇಲ್ಲ. ನಿಮ್ಮ ಸಹಾಯಗಳ ಆವಶ್ಯಕತೆ ಇಲ್ಲ. ನಿಮ್ಮ ಬಲಿದಾನಗಳ ಆವಶ್ಯಕತೆಯೂ ಇಲ್ಲ. ಅಲ್ಲಾಹನು ಸ್ವತಃ ಈ ಜಮಾಅತನ್ನು ಸ್ಥಾಪಿಸಿರುವ ಕಾರಣ ಅದನ್ನು ಚಲಾಯಿಸಲು ವ್ಯವಸ್ಥೆಯನ್ನು ಸಹ ಅವನೇ ಮಾಡುವನು. ನಿಮಗೆ ಜಮಾಅತಿನಲ್ಲಿ ಸೇವೆ ಮಾಡುವ ಸಂದರ್ಭ ದೊರಕಿದರೆ ಅದನ್ನು ಅಲ್ಲಾಹನು ನೀಡಿದ ಅನುಗ್ರಹ ಎಂದು ಭಾವಿಸಿ ಸೇವೆ ಸಲ್ಲಿಸಿರಿ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಮಾತುಗಳನ್ನು ನಮ್ಮ ಜಮಾಅತಿನ ವ್ಯಕ್ತಿಗಳು ಮನವರಿಕೆ ಮಾಡಿಕೊಂಡರು. ಅಲ್ಲಾಹನ ಅನುಗ್ರಹಗಳನ್ನು ಗಳಿಸಲು ಮತ್ತು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶವನ್ನು ಈಡೇರಿಸಲು ಪ್ರತಿಯೊಂದು ರೀತಿಯ ಬಲಿದಾನಗಳನ್ನು ಮಾಡಲು ಅವರು ಸಿದ್ಧರಾದರು. ಅಂತೆಯೇ ಅಲ್ಲಾಹನ ಸಹಾಯದ ದೃಶ್ಯಗಳನ್ನು ನಾವು ಇಂದಿನ ತನಕ ಕಾಣುತ್ತಾ ಇದ್ದೇವೆ. ಅಲ್ಲಾಹನು ಅಹ್ಮದಿಯರ ಹೃದಯಗಳಲ್ಲಿ ಬಲಿದಾನದ ಮಹತ್ವವನ್ನು ಅವತೀರ್ಣಗೊಳಿಸುತ್ತಾನೆ. ಅವರು ಅಸಾಧಾರಣವಾದ ಮಾದರಿಗಳನ್ನು ತೋರಿಸುತ್ತಾರೆ. ನಮ್ಮ ಜಮಾಅತ್‌ನಲ್ಲಿ ವಸಿಯ್ಯತ್ ವ್ಯವಸ್ಥೆ ಇದೆ. ಚಂದಾ ಆಮ್ ವ್ಯವಸ್ಥೆ ಇದೆ. ಇವುಗಳಲ್ಲದೆ ವಿವಿಧ ರೀತಿಗಳಲ್ಲಿ ತ್ಯಾಗಗಳನ್ನು ಮಾಡಲು ಆಹ್ವಾನಿಸಲಾಗುತ್ತಿದೆ. ಆಗ ನಮ್ಮ ಜಮಾಅತಿನ ಜನರು ಅಸಾಧಾರಣ ಉದಾಹರಣೆಗಳನ್ನು ಸ್ಥಾಪಿಸುತ್ತಾರೆ. ತಹ್‌ರೀಕ್ ಜದೀದ್ ಮತ್ತು ವಕ್ಫೇ ಜದೀದ್ ಸ್ಥಿರವಾಗಿ ಚಂದಾ ಸಂಗ್ರಹಿಸಲ್ಪಡುವ ಎರಡು ತಹ್‌ರೀಕ್‌ಗಳಾಗಿವೆ. ಪಾಕಿಸ್ಥಾನದಲ್ಲಿ ವಕ್ಫೇ ಜದೀದ್ ಚಂದಾ ನೀಡುವ ಬಗ್ಗೆ ಜಮಾಅತಿಗೆ ಆಹ್ವಾನವನ್ನು ಮೊದಲ ಬಾರಿ ನೀಡಿದಾಗ, ಅದರ ಉದ್ದೇಶ ಗ್ರಾಮಗಳಲ್ಲಿ ಮತ್ತು ದೂರ ಪ್ರದೇಶಗಳಲ್ಲಿ ತಬ್ಲೀಗ್ ಕೆಲಸದಲ್ಲಿ ವೇಗತೆ ಉಂಟು ಮಾಡಲಿಕ್ಕಾಗಿತ್ತು ಎಂದು ಜಮಾಅತಿನ ಜನರಿಗೆ ತಿಳಿದಿದೆ. ಅನಂತರ ಇದನ್ನು ಲೋಕವಿಡೀ ವಿಸ್ತರಿಸಿದಾಗಲೂ ಅದಕ್ಕೆ ವಿಶಿಷ್ಟ ಉದ್ದೇಶ ಲಕ್ಷ್ಯಗಳಿದ್ದುವು. ಇಷ್ಟೆಲ್ಲಾ ತಹ್‌ರೀಕ್‌ಗಳಿವೆ ಇವುಗಳ ಉದ್ದೇಶವೇನು ಎಂದು ಕೆಲವರು ಕೇಳಬಹುದು. ಇವುಗಳ ಬಗ್ಗೆ ನಾನು ಸ್ವಲ್ಪ ವಿವರಿಸುತ್ತೇನೆ. ವಕ್ಫೇ ಜದೀದ್ ಚಂದಾ ಸಂಗ್ರಹಿಸುವುದು ಕೆಲವು ವಿಶಿಷ್ಟ ದೇಶಗಳಿಗೋಸ್ಕರ ಮತ್ತು ವಿಶಿಷ್ಟ ಪ್ರದೇಶಗಳಿಗೋಸ್ಕರ ವಾಗಿದೆ. ಪಾಶ್ಚಿಮಾತ್ಯ ದೇಶಗಳಿಂದ ಮತ್ತು ಶ್ರೀಮಂತ ದೇಶಗಳಿಂದ ವಕ್ಫೇ ಜದೀದ್ ಚಂದಾ ಸಂಗ್ರಹಿಸಲ್ಪಡುವುದು ಭಾರತ ಮತ್ತು ಆಫ್ರಿಕದ ಗ್ರಾಮ ಪ್ರದೇಶಗಳಲ್ಲಿ ಖರ್ಚು ಮಾಡಲಾಗುತ್ತಿದೆ. ಹಝ್‌ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲಾ ವಕ್ಫೇ ಜದೀದ್ ಚಂದಾವನ್ನು ವಿಸ್ತರಿಸಿದಾಗ, ಶ್ರೀಮಂತ ದೇಶಗಳಲ್ಲಿ ಈ ಚಂದಾದ ವಸೂಲಿ ಜಾರಿಗೊಳಿಸಿದಾಗ, ಅದರ ಉದ್ದೇಶ ಹಿಂದೂಸ್ಥಾನದ ಮತ್ತು ಖಾದಿಯಾನಿನ ಖರ್ಚುವೆಚ್ಚಗಳನ್ನು ವಕ್ಫೇ ಜದೀದ್ ಚಂದಾದಿಂದ ಪೂರೈಸುವುದಾಗಿತ್ತು.

ತಹ್‌ರೀಕ್ ಜದೀದ್ ಚಂದಾದಿಂದ ಲೋಕದ ಪ್ರತಿಯೊಂದು ದೇಶದಲ್ಲಿ ಕೇಂದ್ರದ ನೆರವು ಆವಶ್ಯಕತೆ ಇರುವಲ್ಲಿ ಖರ್ಚು ಮಾಡಲಾಗುತ್ತಿದೆ. ಯಾಕೆಂದರೆ ಈ ಚಂದಾದ ಹಣ ಕೇಂದ್ರಕ್ಕೆ ಬರುತ್ತದೆ. ಆದುದರಿಂದ ಅಲ್ಲಿಂದ ಈ ಹಣವನ್ನು ವಿನಿಯೋಗಿಸಲಾಗುತ್ತಿದೆ. ವಕ್ಫೇ ಜದೀದ್ ಚಂದಾದ ಮೂಲಕ ಬಡ ಮತ್ತು ಅಭಿವೃದ್ಧಿ ಹೊಂದದ ದೇಶಗಳಲ್ಲಿ ಅನೇಕ ಯೋಜನೆಗಳನ್ನು ಈಡೇರಿಸಲಾಗುತ್ತಿದೆ.

ಜನವರಿ ತಿಂಗಳ ಮೊದಲನೆಯ ಅಥವಾ ಎರಡನೆಯ ಶುಕ್ರವಾರ ವಕ್ಫೇ ಜದೀದ್ ಚಂದಾದ ವರ್ಷಾರಂಭ ಘೋಷಿಸಲಾಗುತ್ತಿದೆ. ಆದುದರಿಂದ ನಾನು ಈ ದಿನ ವಾಡಿಕೆಯಂತೆ ವಕ್ಫೇ ಜದೀದ್‌ಗೆ ಸಂಬಂಧಿಸಿ ಮಾತನಾಡುವೆನು. ಮತ್ತು ಹೊಸ ವರ್ಷ ಆರಂಭವಾದ ಬಗ್ಗೆ ಪ್ರಕಟಿಸುವೆನು. ಕಳೆದ ವರ್ಷದ ವರದಿ ಸಹ ನೀಡುವೆನು.

ಅಲ್ಲಾಹನ ಅನುಗ್ರಹದಿಂದ ವಕ್ಫೇ ಜದೀದ್‌ನ 58ನೇ ವರ್ಷ 2015 ಡಿಸೆಂಬರ್‌ನಲ್ಲಿ ಮುಕ್ತಾಯವಾಯಿತು. ಈ ಕಳೆದ ವರ್ಷದಲ್ಲಿ ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಜನರು ಅರುವತ್ತೆಂಟು ಲಕ್ಷ ತೊಂಭತ್ತೊಂದು ಸಾವಿರ ಪೌಂಡ್ ಚಂದಾ ಆಗಿ ನೀಡಿದರು. ಇದು ಅದರ ಹಿಂದಿನ ವರ್ಷದಲ್ಲಿ ವಸೂಲಾದ ಚಂದಾದ ಹಣಕ್ಕಿಂತ ಆರು ಲಕ್ಷ ಎಂಭತ್ತೆರಡು ಸಾವಿರದ ಒಂದು ನೂರ ಐವತ್ತೈದು ಪೌಂಡ್‌ನಷ್ಟು ಹೆಚ್ಚಿಗೆ ಆಗಿದೆ. ಈ ಚಂದಾ ಹಣದ ಮೂರನೆಯ ಒಂದು ಪಾಲು ಅಭಿವೃದ್ಧಿ ಹೊಂದದ ಮತ್ತು ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಎಂದರೆ ಬಡ ದೇಶಗಳಲ್ಲಿ

ಖರ್ಚು ಮಾಡಲಾಗುತ್ತಿದೆ. ಉಳಿದ ಹಣದಲ್ಲಿ ಅರ್ಧಾಂಶವನ್ನು ಖಾದಿಯಾನ್ ಮತ್ತು ಭಾರತದ ಇತರ ಜಮಾಅತ್‌ಗಳಲ್ಲಿ ಖರ್ಚು ಮಾಡಲಾಗುತ್ತಿದೆ. ಅನಂತರ ಬಾಕಿಯಾಗುವ ಹಣ ಎಂದರೆ ಜುಮ್ಲಾ ವಸೂಲಾದ ಚಂದಾದ ಮೂರನೆಯ ಒಂದಂಶ ಆಫ್ರಿಕ ಮತ್ತು ಇತರ ದೇಶಗಳಲ್ಲಿ ಖರ್ಚು ಮಾಡಲಾಗುತ್ತಿದೆ. ಭಾರತದಲ್ಲಿ ಈ ವರ್ಷ ಹತ್ತೊಂಭತ್ತು ಮಸ್‌ಜಿದ್‌ಗಳ ನಿರ್ಮಾಣ ಪೂರ್ಣಗೊಂಡಿದೆ. ಎರಡು ಮಸ್‌ಜಿದ್‌ಗಳು ನಿರ್ಮಾಣದ ಹಂತದಲ್ಲಿದೆ. ಈ ವರ್ಷ 23 ತಬ್ಲೀಗ್ ಕೇಂದ್ರಗಳನ್ನು ನಿರ್ಮಿಸಲಾಗಿದೆ. ನಾಲ್ಕು ತಬ್ಲೀಗ್ ಕೇಂದ್ರಗಳು ನಿರ್ಮಾಣ ಗೊಳ್ಳುತ್ತಿವೆ. ಇದಲ್ಲದೆ ಖಾದಿಯಾನ್‌ನಲ್ಲಿ ಜಲ್ಸಗಾಹ್ ಮತ್ತು ಬೇರೆ ಹಲವು ಯೋಜನೆಗಳಿಗೆ ಹಣ ಖರ್ಚು ಮಾಡಲಾಗಿದೆ. ನೇಪಾಲದ ಜಮಾಅತ್ ಭಾರತದ ಅಧೀನವಾಗಿ ಕಾರ್ಯನಿರ್ವಹಿಸುತ್ತದೆ. ಖಾದಿಯಾನಿನ ವಕಾಲತೆ ತಅ್‌ಮೀರೋ ತನ್‌ಫೀದ್ ನೇಪಾಲದ ಕಾರ್ಯಗಳನ್ನು ನಿರ್ವಹಿಸುತ್ತದೆ. ಭೂತಾನದ ತಬ್ಲೀಗ್ ವ್ಯವಸ್ಥೆ ಸಹ ಇದರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತದೆ. ನೇಪಾಲದಲ್ಲಿ ಎರಡು ಮಸ್‌ಜಿದ್‌ಗಳನ್ನು ನಿರ್ಮಿಸಲಾ ಗಿದೆ. ಎರಡು ತಾತ್ಕಾಲಿಕ ಶೆಡ್‌ಗಳನ್ನೂ ನಿರ್ಮಿಸಲಾಗಿದೆ.

ಎಲ್ಲ ಕಡೆ ಮಸ್‌ಜಿದ್ ಮತ್ತು ಮಿಶನ್ ಹೌಸ್‌ಗಳನ್ನು ನಿರ್ಮಿಸುವ ಬಗ್ಗೆ ವಿಶಿಷ್ಟ ಶ್ರದ್ಧೆ ನೀಡಲಾಗುತ್ತಿದೆ. ಇವುಗಳಲ್ಲದೆ ಬೇರೆ ಕೆಲಸಗಳಿಗೂ ಹಣ ವಿನಿಯೋಗಿಸಲಾಗುತ್ತಿದೆ. ಭಾರತದಲ್ಲಿ ಈ ಕಳೆದ ವರ್ಷ ತರಬೇತಿ ಕ್ಲಾಸ್‌ಗಳನ್ನೂ ರೆಫ್ರಶರ್ ಕ್ಲಾಸ್‌ಗಳನ್ನೂ ನಡೆಸಲಾಗಿತ್ತು. ಅವುಗಳಿಗೋಸ್ಕರ ಸಹ ಹಣ ಖರ್ಚು ಮಾಡಲಾಗಿದೆ. ಭಾರತದಲ್ಲಿ ಈಗ ಕೆಲಸ ಮಾಡುತ್ತಿ ರುವ ಮುಅಲ್ಲಿಮ್‌ಗಳ ಸಂಖ್ಯೆ 1127 ಆಗಿದೆ. ಅವರ ಸಂಬಳ, ಅವರ ಪ್ರಯಾಣದ ಖರ್ಚು, ಅವರ ವಾಸಸ್ಥಳದ ಆವಶ್ಯಕತೆಗಳಿಗೋಸ್ಕರ ಖರ್ಚು, ಈ ರೀತಿಯಾಗಿ ಬಹಳ ವಿಶಾಲವಾಗಿ ಖರ್ಚು ಆಗುತ್ತದೆ. ಮತ್ತೆ ಆಫ್ರಿಕದ 26 ದೇಶಗಳಲ್ಲಿ 1287 ಲೋಕಲ್ ಮುಅಲ್ಲಿಮ್‌ಗಳು ಕೆಲಸ ಮಾಡುತ್ತಿದ್ದಾರೆ. ಅಲ್ಲಿನ ಗ್ರಾಮಗಳಲ್ಲಿ ಮಸ್‌ಜಿದ್‌ಗಳನ್ನು ನಿರ್ಮಿಸುವುದರ ಜೊತೆಗೆ ಮುಅಲ್ಲಿಮರಿಗೆ ವಾಸಿಸಲು ಮನೆಗಳನ್ನು ಅಥವಾ ಕೋಣೆಗಳನ್ನು ನಿರ್ಮಿಸಿ ಕೊಡಲಾಗುತ್ತಿದೆ. ಮತ್ತೆ ಕೆಲವು ಪ್ರದೇಶಗಳಲ್ಲಿ ಜಮಾಅತ್‌ಗಳನ್ನು ಸ್ಥಿರ ಪಡಿಸಲು ಮುಅಲ್ಲಿಮರನ್ನು ಕಳುಹಿಸಬೇಕಾಗುತ್ತದೆ. (ವಾಸ್ತವಿಕವಾಗಿ ಮುಅಲ್ಲಿಮರ ಸಂಖ್ಯೆ ಸಾಲದು. ಬಹಳ ಹೆಚ್ಚು ಮುಅಲ್ಲಿಮ್‌ಗಳ ಆವಶ್ಯಕತೆ ಇದೆ. ಹೀಗಿದ್ದರೂ ಸಾಕಷ್ಟು ಪ್ರಯತ್ನ ಮಾಡಲಾಗುತ್ತಿದೆ.) ಅಂತಹ ಸ್ಥಳಗಳಲ್ಲಿ ವಾಸಕ್ಕೆ ಕಟ್ಟಡ ಕೂಡಲೇ ನಿರ್ಮಿಸಲು ಸಾಧ್ಯವಾಗದಿ ದ್ದರೆ ತಾತ್ಕಾಲಿಕವಾಗಿ ಬಾಡಿಗೆಗೆ ಕಟ್ಟಡಗಳನ್ನು ಪಡೆಯಲಾಗುತ್ತಿದೆ. ಈಗ ಆಫ್ರಿಕದ 372 ಜಮಾಅತ್‌ಗಳಲ್ಲಿ ಬಾಡಿಗೆಗೆ ಮನೆ ಪಡೆದುಕೊಂಡು ಮುಅಲ್ಲಿಮರಿಗೆ ವಾಸದ ವ್ಯವಸ್ಥೆ ಮಾಡಲಾಗಿದೆ. ಈ ವರ್ಷ ಆಫ್ರಿಕದಲ್ಲಿ 130 ಹೊಸ ಮಸ್‌ಜಿದ್‌ಗಳ ನಿರ್ಮಾಣ ಪೂರ್ಣಗೊಂಡಿತು. 47 ಮಸ್‌ಜಿದ್‌ಗಳು ನಿರ್ಮಾಣದಲ್ಲಿವೆ. ಇದಲ್ಲದೆ ಇನ್ನೂ 95 ಮಸ್‌ಜಿದ್ ಗಳನ್ನು ನಿರ್ಮಿಸುವ ಯೋಜನೆ ಮಾಡಲಾಗಿದೆ. ಆಫ್ರಿಕದ 18 ದೇಶಗಳಲ್ಲಿ 82 ಹೊಸ ಮಿಶನ್ ಹೌಸ್‌ಗಳ ನಿರ್ಮಾಣ ಪೂರ್ಣಗೊಂಡಿದೆ. 13 ದೇಶಗಳಲ್ಲಿ 21 ಮಿಶನ್ ಹೌಸ್ ನಿರ್ಮಾಣ ಹಂತದಲ್ಲಿದೆ. ಇವುಗಳಲ್ಲದೆ ಬೇರೆ ನಿರ್ಮಾಣ ಯೋಜನೆಗಳು ಸಹ ಇವೆ. ಆಫ್ರಿಕದ ದೇಶಗಳಲ್ಲಿ ಜಮಾಅತ್‌ಗಳ ಮತ್ತು ಹೊಸದಾಗಿ ಜಮಾಅತ್‌ಗೆ ಸೇರಿದವರ ತರಬೇತಿ ಗೋಸ್ಕರ ತರಬೇತಿ ಕ್ಲಾಸ್‌ಗಳನ್ನೂ ರೆಫ್ರಶರ್ ಕ್ಲಾಸ್‌ಗಳನ್ನೂ ನಡೆಸಲಾಗು ತ್ತಿದೆ. ಅಂದಾಜು 2156 ಸ್ಥಳಗಳಲ್ಲಿ ಅಂದಾಜು ಮುವತ್ತೇಳು ಸಾವಿರ ತರಬೇತಿ ಕ್ಲಾಸ್‌ಗಳನ್ನೂ ನಡೆಸಲಾಯಿತು. ಅವುಗಳಲ್ಲಿ ಅಂದಾಜು ಒಂದು ಲಕ್ಷ ಹೊಸದಾಗಿ ಅಹ್ಮದಿಯರಾದವರು ಭಾಗವಹಿಸಿದರು. 1132 ಇಮಾಮರಿಗೆ ತರಬೇತಿ ನೀಡಲಾಯಿತು. ಹೊಸದಾಗಿ ಅಹ್ಮದಿಯರಾದವರ ಶಿಕ್ಷಣ ಮತ್ತು ತರಬೇತಿಗೋಸ್ಕರ ಮತ್ತು ಅವರು ಜಮಾಅತ್ ವ್ಯವಸ್ಥೆಯಲ್ಲಿ ಸಕ್ರಿಯರಾಗಲು ನಾನು ಹೇಳಿದಂತಹ ಶೈಕ್ಷಣಿಕ ಮತ್ತು ತರಬೇತಿಯ ಕ್ಲಾಸ್ ಗಳನ್ನು ಹಾಗೂ ರೆಫ್ರಶರ್ ಕ್ಲಾಸ್‌ಗಳನ್ನು ನಡೆಸಲಾಗುತ್ತದೆ. ಅದೂ ಅಲ್ಲದೆ ಅನೇಕ ಉತ್ತಮ ಮನೋಭಾವದ ಮಸ್‌ಜಿದ್‌ಗಳ ಇಮಾಮರೂ ಬೈಅತ್ ಮಾಡಿ ನಮ್ಮ ಜಮಾಅತಿಗೆ ಸೇರುತ್ತಿದ್ದಾರೆ. ಇಂತಹ ಜನರಿಗೆ ಸಹ ತರಬೇತಿ ನೀಡಬೇಕಾಗುತ್ತದೆ. ಅವರಿಗೆ ನೈಜ ಇಸ್ಲಾಮಿನ ತತ್ವಗಳನ್ನು ಕಲಿಸಬೇಕಾಗು ತ್ತದೆ. ಅದಕ್ಕಾಗಿ ಕ್ಲಾಸುಗಳನ್ನು ಏರ್ಪಡಿಸಬೇಕಾಗುತ್ತದೆ.

ವಕ್‌ಫೇ ಜದೀದ್ ಚಂದ ಕೊಡುವವರ ಸಂಖ್ಯೆ 2010ರಲ್ಲಿ ಆರು ಲಕ್ಷದಷ್ಟಿತ್ತು. ಅಲ್ಲಾಹನ ಅನುಗ್ರಹದಿಂದ ಈಗ ಅದರ ಸಂಖ್ಯೆ ಹನ್ನೆರಡು ಲಕ್ಷಕ್ಕಿಂತ ಹೆಚ್ಚಿಗೆ ಇದೆ. ಆದರೂ ಇನ್ನಷ್ಟು ಇವರ ಸಂಖ್ಯೆ ವರ್ಧಿಸ ಬಹುದಾಗಿದೆ. ನಾನು ಚಂದ ಕೊಡುವವರಿಗೆ ಸಂಬಂಧಿಸಿ ಕೆಲವು ಘಟನೆ ಗಳನ್ನು ಸಹ ನಿಮ್ಮ ಮುಂದೆ ಇಡುತ್ತೇನೆ:

ಟಾಂಝಾನಿಯದ ಒಬ್ಬ ಮುಬಲ್ಲಿಗ್ ಹೀಗೆ ಬರೆಯುತ್ತಾರೆ: ಓರ್ವ ಮಹಿಳೆ ಒಂದು ತಿಂಗಳ ಮೊದಲು ಬೈಅತ್ ಮಾಡಿದ್ದರು. ಆಕೆ ಒಂದು ಗ್ರಾಮದ ನಿವಾಸಿಯಾಗಿದ್ದಾರೆ. ಅವರಿಗೆ ವಕ್‌ಫೇ ಜದೀದ್ ಚಂದಾದ ಅನುಗ್ರಹಗಳ ಬಗ್ಗೆ ಹೇಳಿದಾಗ "ಈಗ ನನ್ನ ಬಳಿ ಹಣ ಇಲ್ಲ; ಆದರೆ ಚಂದಾದ ವರ್ಷ ಮುಗಿತಾಯವಾಗಲಿದೆ. ನಾನು ಚಂದಾದ ಅನುಗ್ರಹ ಕಳೆದುಕೊಳ್ಳಲು ಬಯಸುವುದಿಲ್ಲ. ಆದುದರಿಂದ ಸ್ವಲ್ಪ ತಾಳಿರಿ" ಎಂದು ಹೇಳಿ ಮನೆಗೆ ಹೋದರು. ಅಲ್ಲಿ ಮೊಟ್ಟೆಗಳಿದ್ದುವು. ಅವರು ಆ ಮೊಟ್ಟೆ ಗಳನ್ನು ಪೇಟೆಗೆ ತೆಗೆದುಕೊಂಡು ಹೋಗಿ ಮಾರಿದಾಗ ದೊರೆತ ಎರಡು ಸಾವಿರ ಶಿಲ್ಲಿಂಗ್ ವಕ್‌ಫೇ ಜದೀದ್ ಚಂದವಾಗಿ ನೀಡಿದರು. ಕೇವಲ ಒಂದು ತಿಂಗಳ ಹಿಂದೆ ಬೈಅತ್ ಮಾಡಿದ ಆ ಮಹಿಳೆಗೆ ಚಂದಾ ಕೊಡುವುದು ಆವಶ್ಯಕವಾಗಿದೆ ಎಂಬ ಭಾವನೆ ಉಂಟಾಗಿತ್ತು.

ಗ್ಯಾಂಬಿಯಾದ ಅಮೀರ್ ಸಾಹೇಬರು ಹೀಗೆ ಬರೆದಿದ್ದಾರೆ: ಒಬ್ಬ ವ್ಯಕ್ತಿ ಗ್ರಾಮ ವಾಸಿಯಾಗಿದ್ದರು. ಅವರು ಒಂದು ವರ್ಷದಿಂದ ರೋಗಿಯಾಗಿದ್ದರು. ಅವರಿಗೆ ನಡೆಯಲು, ಕೆಲಸ ಮಾಡಲು ಸಾಧ್ಯವಾಗದ ಕಾರಣ ಅವರ ಆರ್ಥಿಕ ಸ್ಥಿತಿ ಬಹಳ ಕೆಟ್ಟು ಹೋಗಿತ್ತು. ವಕ್‌ಫೇ ಜದೀದ್ ಚಂದ ಕೊಡುವ ಬಗ್ಗೆ ಅವರಿಗೆ ಹೇಳಿದಾಗ ಅವರು ತಮ್ಮ ಬಳಿ ಇದ್ದ ತಮಗೆ ಸಹಾಯ ಧನವಾಗಿ ದೊರೆತ ಐದು ಡಲಾಸಿ ಹಣವನ್ನು ವಕ್‌ಫೇ ಜದೀದ್ ಚಂದಾ ಆಗಿ ನೀಡಿದರು. ಈ ಚಂದಾ ಕೊಟ್ಟ ನಂತರ ಅಲ್ಲಾಹನು ಅವರಿಗೆ ಹೇಗೆ ಅನುಗ್ರಹ ನೀಡಿದನೆಂದರೆ ನಡೆಯಲು ಸಾಧ್ಯವಾಗದಿದ್ದ ಅವರಿಗೆ ಜಾನುವಾರುಗಳ ಒಂದು ಹಿಂಡು ಈಗ ಇದೆ. ಅವರು ಕೃಷಿಕರಾಗಿದ್ದಾರೆ. ಅವರು ಹೇಳುತ್ತಾರೆ: ಇವುಗಳೆಲ್ಲಾ ಅಲ್ಲಾಹನ ಅನುಗ್ರಹಗಳಾಗಿವೆ. ನನ್ನ ಕೃಷಿಯ ಬೆಳೆಗಳು ಉತ್ತಮವಾಗಲು ತೊಡಗಿವೆ. ಈಗ ನನ್ನ ಬಳಿ ಜಾನುವಾರುಗಳ ಹಿಂಡೇ ಇದೆ. ಇವುಗಳೆಲ್ಲಾ ಚಂದ ನೀಡುವ ಮೂಲಕ ದೊರೆತ ಅನುಗ್ರಹಗಳಾಗಿವೆ.

ಫಿನ್‌ಲೇಂಡ್‌ನಿಂದ ಒಬ್ಬರು ಹೀಗೆ ಬರೆದಿದ್ದಾರೆ: ಹಿಂದಿನ ವರ್ಷ ನಾನು 510 ಯುರೋ ವಕ್‌ಫೇ ಜದೀದ್ ಚಂದಾ ಆಗಿ ವಾಗ್ದಾನ ಮಾಡಿದ್ದೆ. ನಾನು ಯೋಚಿಸಿದೆ ಈಗ ನನ್ನ ಸ್ಥಿತಿ ಚೆನ್ನಾಗಿಲ್ಲ. ಈ ಸಲ ನಾನು ನನ್ನ ವಾಗ್ದಾನ ಒಂದು ನೂರು ಯುರೋ ಆಗಿ ಮಾಡಿದೆ. ನನಗೆ ಹೆಚ್ಚಿಗೆ ಕೊಡಲಾಗದು ಎಂದು ನಿರ್ಧರಿಸಿದೆ. ಅಲ್ಲಾಹನು ನನ್ನನ್ನು ಹೇಗೆ ಹಿಡಿದನೆಂದರೆ ಒಂದು ದಿನ ನನ್ನ ಕಾರು ಮಾರ್ಗದಲ್ಲಿ ಕೆಟ್ಟು ಹೋಯಿತು. ಅದರ ರಿಪೇರಿಗೋಸ್ಕರ ಗ್ಯಾರೇಜಿಗೆ ತೆಗೆದುಕೊಂಡು ಹೋದಾಗ 510 ಯುರೋ ಕೊಡಬೇಕಾಯಿತು. ಅದು ನಾನು ಮೊದಲು ವಾಗ್ದಾನ ಮಾಡುತ್ತಿದ್ದ ಚಂದಾದ ಅಷ್ಟೇ ಆಗಿತ್ತು.

ವಾಸ್ತವದಲ್ಲಿ ಅಲ್ಲಾಹನು ನನಗೆ ಪಾಠ ಕಲಿಸಲು ಬಯಸಿದ್ದಾನೆ ಎಂದು ಹೇಳಿ ಅವರು ತನ್ನ ವಾಗ್ದಾನ ವರ್ಧಿಸಿ ಆ ಪ್ರಕಾರ ಪೂರ್ಣ ಚಂದಾ ನೀಡಿದರು.

ಸಿಯೆರ್ರಾಲಿಯೋನ್ ದೇಶದ ಒಬ್ಬ ಅಹ್ಮದಿ ಮಹಿಳೆ ಪ್ರೈಮರಿ ಸ್ಕೂಲಿನ ಹೆಡ್‌ಮಿಸ್ಟ್ರೆಸ್ ಆಗಿದ್ದಾರೆ. ಅವರು ಹೇಳುತ್ತಾರೆ: ಮುಬಲ್ಲಿಗ್ ಸಾಹೇಬರು ವಕ್‌ಫೇ ಜದೀದ್ ಚಂದಾದ ಬಗ್ಗೆ ಹೇಳಿದಾಗ ನನ್ನ ಬಳಿ ಹಣ ಇರಲಿಲ್ಲ. ಆದರೂ ಅನಂತರ ಅದನ್ನು ಕೊಟ್ಟೆನು. ಅವರು ಹೇಳುತ್ತಾರೆ: ನನ್ನ ಒಬ್ಬ ಸಹೋದರ ಕೆಲವು ವರ್ಷಗಳಿಂದ ಕ್ರೈಸ್ತನಾಗಿದ್ದನು. ಅವನು ನನ್ನೊಂದಿಗೆ "ನೀನು ಸಹ ಕ್ರೈಸ್ತಳಾಗು" ಎಂದು ಹೇಳುತ್ತಾ ಇದ್ದನು. ನಾನು ಅವನ ಮಾತಿಗೆ ಒಪ್ಪದ ಕಾರಣ ಅವನು ಸಿಟ್ಟಾಗಿದ್ದನು. ಅವನು ಅಮೇರಿಕಕ್ಕೆ ಹೋದನು. ನಾನು ಆರ್ಥಿಕ ಮುಗ್ಗಟ್ಟಿನಲ್ಲಿದ್ದೆನು. ಆದರೂ ನಾನು ಕಷ್ಟಪಟ್ಟು ಚಂದಾದ ಹಣ ನೀಡಿದ್ದೆ. ನನ್ನ ಸ್ಥಿತಿ ಚಂದಾ ಕೊಡುವಂತಿರಲಿಲ್ಲ. ಚಂದಾ ಕೊಟ್ಟ ನಂತರ ಒಂದು ದಿನ ನನಗೆ ನನ್ನ ಸಹೋದರನ ಫೋನ್ ಬಂತು. ಅವನು ಹೇಳಿದನು– ಚಿಂತೆಯಿಲ್ಲ, ನೀನು ಅಹ್ಮದಿ ಮುಸ್ಲಿಮಳಾಗಿಯೇ ಜೀವಿಸು. ನಾನು ಆಕ್ಷೇಪಿಸುವುದಿಲ್ಲ. ನಿನಗೆ ಸಹಾಯ ಮಾಡಬೇಕೆಂದು ನನಗೆ ತೋಚಿದೆ. ಆದುದರಿಂದ ನಿನಗೆ ನಾನು ಸ್ವಲ್ಪ ಹಣ ಕಳುಹಿಸುತ್ತಿದ್ದೇನೆ ಎಂದು ಹೇಳಿದನು. ಅವನು ದೊಡ್ಡ ಸಂಖ್ಯೆಯ ಹಣ ಕಳುಹಿಸಿದನು. ಈ ರೀತಿ ಸಹೋದರನೊಂದಿಗೆ ಸಂಬಂಧ ಸ್ಥಾಪಿತವಾಯಿತು. ಮತ್ತು ಹಣಕಾಸಿನ ಮುಗ್ಗಟ್ಟು ಪರಿಹಾರಗೊಂಡಿತು.

ಭಾರತದ ಒಬ್ಬ ಮುಬಲ್ಲಿಗ್ ಹೀಗೆ ಬರೆಯುತ್ತಾರೆ: ಕೊಯಂಬತ್ತೂರಿನ ಒಬ್ಬ ಅಹ್ಮದಿ ತನ್ನ ಮಗಳಿಗೋಸ್ಕರ ಆಭರಣ ಖರೀದಿಸಲು ಜುವೆಲ್ಲರಿಗೆ ಹೋಗಿದ್ದರು. ಅವರು ಅಲ್ಲಿ ಆಭರಣಗಳನ್ನು ನೋಡುತ್ತಾ ಇದ್ದಾಗ ಜುಮುಅದ ಸಮಯವಾಯಿತು. ಅವರು ಹೇಳಿದರು: 'ನಾವು ಜುಮುಅ ನಮಾಝಿನ ಬಳಿಕ ಬಂದು ಆಭರಣ ಖರೀದಿಸುವೆನು' ಎಂದು ಹೇಳಿ ಅವರು ಮಸ್‌ಜಿದ್‌ಗೆ ತೆರಳಿದರು. ಜುಮುಅದ ಖುತ್‌ಬದಲ್ಲಿ ನನ್ನ ಖುತ್‌ಬದ ಸಾರಾಂಶವನ್ನು ಅವರು ಆಲಿಸಿದರು. ತಹ್‌ರೀಕ್ ಜದೀದ್ ಚಂದಾದ ಹೊಸ ವರ್ಷದ ಘೋಷಣೆ ಅದರಲ್ಲಿ ಮಾಡಲಾಗಿತ್ತು. ಒಬ್ಬ ಅಂಧ ಮಹಿಳೆ ಮಾಡಿದ ತ್ಯಾಗದ ಬಗ್ಗೆ ಅದರಲ್ಲಿ ವಿವರಿಸಲಾಗಿತ್ತು. ಆ ಖುತ್‌ಬ ಆ ಅಹ್ಮದಿಯ ಮೇಲೆ ಬಹಳ ಪ್ರಭಾವ ಬೀರಿತು. ಅವರು ಆಭರಣ ಖರೀದಿಸಲು ತಂದಿದ್ದ ಹಣದಿಂದ ತನ್ನ ವಕ್‌ಫೇ ಜದೀದ್ ಚಂದಾ ಬಾಕಿಯಾಗಿದ್ದುದನ್ನು ನೀಡಿದರು. ಮಸ್‌ಜಿದ್‌ನಿಂದ ಹೊರಗೆ ಬಂದು ಈ ವಿಷಯ ತನ್ನ ಪತ್ನಿಗೆ ತಿಳಿಸಿದಾಗ ಅವರು ಸಹ ಸಂತೋಷ ದಿಂದ ಹೇಳಿದರು: 'ಖುತ್‌ಬ ಆಲಿಸುವಾಗ ನಾನು ಕೂಡ ಹೀಗೆಯೇ ನಿರ್ಧರಿಸಿದ್ದೆನು. ನಾವು ಚಂದ ಕೊಡುವೆವು. ನಮ್ಮ ಮಗಳಿಗೆ ಆಭರಣ ಖರೀದಿಸಲು ಅಲ್ಲಾಹನು ಬೇರೆ ಯಾವುದಾದರೂ ವ್ಯವಸ್ಥೆ ಮಾಡುವನು' ಎಂದು.

ಭಾರತದ ಸಹರಾನ್‌ಪುರದಿಂದ ವಕ್‌ಫೇ ಜದೀದ್ ಇನ್ಸ್‌ಪೆಕ್ಟರ್ ಹೀಗೆ ಬರೆಯುತ್ತಾರೆ: ಉತ್ತರ ಪ್ರದೇಶದ ಒಂದು ಗ್ರಾಮದಲ್ಲಿ ಒಬ್ಬ ಅಹ್ಮದಿಯ ಮನೆಗೆ ವಕ್‌ಫೇ ಜದೀದ್ ಚಂದ ವಸೂಲಿಗೆ ಹೋದಾಗ ಆ ಅಹ್ಮದಿ ತನ್ನ ಪತ್ನಿಯೊಂದಿಗೆ ಹೇಳಿದರು: ಈದ್ ಹಬ್ಬ ಸಮೀಪವಾಗಿದೆ. ನನ್ನ ಬಳಿ ಇನ್ನೂರು ರೂಪಾಯಿಗಳಿವೆ ಇದರಿಂದ ಈದ್‌ಗೋಸ್ಕರ ಬಟ್ಟೆ ಹೊಲಿಸಲು ಇಷ್ಟಪಡುವುದಾದರೆ ಹಾಗೆ ಮಾಡು. ಅಥವಾ ಚಂದಾ ಕೊಡಲು ಇಚ್ಛಿಸುವುದಾದರೆ ಚಂದಾ ಕೊಡು ಎಂದು ಹೇಳಿದರು. ಆಗ ಪತ್ನಿ ಹೇಳಿದರು: ನೀವು ಚಂದ ಕೊಡಿರಿ ಬಟ್ಟೆಗಳನ್ನು ಅನಂತರ ಹೊಲಿಸಬಹುದು. ಕೆಲವು ತಿಂಗಳ ನಂತರ ಇನ್ಸ್‌ಪೆಕ್ಟರ್ ಪುನಃ ಅವರ ಮನೆಗೆ ಭೇಟಿ ನೀಡಿದಾಗ ಅವರ ಮನೆಯನ್ನು ನೋಡಿ ಬಹಳ ಸಂತೋಷವಾಯಿತು. ಅಹ್ಮದಿ ಹೇಳಿದರು: ನಾವು ಚಂದಾ ಕೊಟ್ಟ ನಂತರ ನಮಗೆ ಬಹಳ ಕೆಲಸ ದೊರಕಿತು. ನಾನು ಹಿಂದೆ ಗದ್ದೆಗಳಲ್ಲಿ ಬೇರೆ ಜನರ ಟ್ರಾಕ್ಟರ್ ಚಲಾಯಿಸುತ್ತಿದ್ದೆ. ಈಗ ಅಲ್ಲಾಹನು ಹೇಗೆ ಅನುಗ್ರಹ ನೀಡಿದ್ದಾನೆಂದರೆ ನಾನು ಸ್ವತಃ ಟ್ರಾಕ್ಟರ್ ಖರೀದಿಸಿದೆ. ಮತ್ತು ಕೆಲಸಗಳಲ್ಲಿ ಬಹಳ ಅನುಗ್ರಹ ಲಭಿಸುತ್ತಿದೆ.

ಭಾರತದ ಒಡಿಶಾದಲ್ಲಿ ಒಬ್ಬ ಅಹ್ಮದಿ ಸಾಲದಲ್ಲಿ ಮುಳುಗಿದ್ದರು. ಆ ಕಾರಣದಿಂದ ಅವರು ಜನರಿಗೆ ಕಾಣದ ಹಾಗೆ ತಿರುಗಾಡುತ್ತಿದ್ದರು. ನಂತರ ಅವರು ಅಲ್ಲಿಂದ ಹೈದರಾಬಾದಿಗೆ ಹೋದರು. ಅವರು ಅಲ್ಲಿನ ಜಮಾಅತನ್ನು ಸಂಪರ್ಕಿಸಿದಾಗ ಮುಬಲ್ಲಿಗ್ ಅಥವಾ ಇನ್ಸ್‌ಪೆಕ್ಟರ್ ಸಾಹಿಬ್ ಚಂದಾದ ಮಹತ್ವವನ್ನು ವಿವರಿಸಿದರು. ಅವರು ಹೇಗಾದರೂ ಮಾಡಿ ತನ್ನ ಚಂದಾ ಕೊಡುತ್ತಾ ಜಮಾಅತ್‌ನೊಂದಿಗೆ ಸಂಪರ್ಕ ಇರಿಸಿದರು. ಅವರು ಹೇಳುತ್ತಾರೆ: ಅಲ್ಲಾಹನು ನನಗೆ ಹೇಗೆ ಅನುಗ್ರಹ ನೀಡಿದನೆಂದರೆ ನನಗೆ ಸಂಪಾದನೆ ಆಗಲು ತೊಡಗಿತು. ಅಲ್ಲಾಹನ ಅನುಗ್ರಹದಿಂದ ಎಲ್ಲ ಸಾಲಗಳನ್ನು ಮರುಪಾವತಿ ಮಾಡಿದೆ. ನಾನು ನನಗೆ ಮನೆ ಸಹ ಖರೀದಿಸಿದೆ. ಅವರು ಈಗ ಬಹಳ ಪಟ್ಟು ವರ್ಧಿಸಿ ಚಂದ ವಾಗ್ದಾನ ಮಾಡಿದ್ದಾರೆ.

(ನಂತರ ಹುಝೂರ್ ಅಯ್ಯದಹುಲ್ಲಾಹು ತಆಲಾ ರವರು ಆಸ್ಟ್ರೇಲಿಯಾ, ನಾರ್ವೆ, ಕೋಂಗೋ, ಜರ್ಮನಿ, ಕೆನಡ, ಟಾಂಝಾನಿಯಾ, ದೇಶಗಳ ಕೆಲವು ಜನರಿಗೆ ವಕ್‌ಫೇ ಜದೀದ್ ಚಂದಾದ ಮೂಲಕ ದೊರೆತ ಅನುಗ್ರಹಗಳನ್ನು ವಿವರಿಸಿದರು. ಅನಂತರ ಹುಝೂರ್ ಹೀಗೆ ಹೇಳಿದರು:)

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: ಪರಿಶುದ್ಧವಾಗಿ ಸಂಪಾದಿಸಿದ ಹಣದಿಂದ ನೀಡಿದ ಒಂದು ಖರ್ಜೂರದ ಬೀಜವನ್ನು ಸಹ ಅಲ್ಲಾಹನು ಪರ್ವತದಷ್ಟು ವರ್ಧಿಸುತ್ತಾನೆ. ಒಂದು ಚಿಕ್ಕ ಕರು ದೊಡ್ಡ ಮೃಗವಾಗಿ ಬೆಳೆಯುತ್ತದೆ. ಇದೇ ರೀತಿ ಪರಿಶುದ್ಧವಾಗಿ ಸಂಪಾದಿಸಿದ ಹಣದಿಂದ ಮಾಡಿದ ತ್ಯಾಗವನ್ನು ಅಲ್ಲಾಹನು ವರ್ಧಿಸುತ್ತಾನೆ. ಈ ಕಾಲದಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನ ವ್ಯಕ್ತಿಗಳಿಗೆ ಇದನ್ನು ತೋರಿಸುತ್ತಾ ಇದ್ದಾನೆ.

ಈಗ ನಾನು ಕಳೆದ ವರ್ಷದ ವರದಿ ನೀಡುತ್ತೇನೆ: ಪಾಕಿಸ್ತಾನದ ಹೊರತಾಗಿರುವ ದೇಶಗಳಲ್ಲಿ ಪ್ರಥಮ ಸ್ಥಾನ ಬ್ರಿಟನಿಗೆ. ಅಮೇರಿಕ ದ್ವಿತೀಯ ಸ್ಥಾನದಲ್ಲಿದೆ. ಜರ್ಮನಿ ತೃತೀಯ ಸ್ಥಾನದಲ್ಲಿದೆ. ಕೆನಡಕ್ಕೆ ಚತುರ್ಥ ಸ್ಥಾನ. ಭಾರತ ಪಂಚಮ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ ಆರನೆಯ ಸ್ಥಾನದಲ್ಲಿದೆ. ಇಂಡೋನೇಶಿಯ ಏಳನೆಯ ಸ್ಥಾನದಲ್ಲಿದೆ. ಮಧ್ಯಪೂರ್ವದ ಒಂದು ದೇಶ ಎಂಟನೆಯ ಸ್ಥಾನದಲ್ಲಿದೆ. ಬೆಲ್‌ಜಿಯಮ್ ಒಂಬತ್ತನೆಯ ಸ್ಥಾನದಲ್ಲಿ ಮತ್ತು ಘಾನ ಹತ್ತನೆಯ ಸ್ಥಾನದಲ್ಲಿದೆ.

ಸ್ಥಳೀಯ ಕರೆನ್ಸಿಯ ಪ್ರಕಾರ ವರ್ಧನೆಯ ದೃಷ್ಟಿಯಲ್ಲಿ ಘಾನ ಪ್ರಥಮ ಸ್ಥಾನದಲ್ಲಿದೆ. ಅಮೇರಿಕ ದ್ವಿತೀಯ ಸ್ಥಾನದಲ್ಲಿದೆ. ಮತ್ತು ಬ್ರಿಟನ್ ತೃತೀಯ ಸ್ಥಾನದಲ್ಲಿದೆ. ದೊಡ್ಡ ಜಮಾಅತ್‌ಗಳಲ್ಲಿ ವೈಯಕ್ತಿಕವಾಗಿ ಹೆಚ್ಚು ಚಂದಾ ನೀಡಿದ ಜಮಾಅತ್‌ಗಳು ಅನುಕ್ರಮವಾಗಿ ಹೀಗಿವೆ: ಒಂದು ಮಧ್ಯಪೂರ್ವ ದೇಶ, ಅಮೇರಿಕ, ಅನಂತರ ಇನ್ನೊಂದು ಮಧ್ಯಪೂರ್ವ ದೇಶ, ಸ್ವಿಝರ್‌ಲೇಂಡ್, ಬ್ರಿಟನ್, ಆಸ್ಟ್ರೇಲಿಯಾ, ಬೆಲ್‌ಜಿಯಂ, ಜರ್ಮನಿ, ಕೆನಡ.

ಈ ವರ್ಷ ವಕ್‌ಫೇ ಜದೀದ್ ಚಂದಾ ನೀಡುವವರ ಸಂಖ್ಯೆ ವರ್ಧಿಸಿದ ದೃಷ್ಟಿಯಲ್ಲಿ ಪ್ರಥಮ ಸ್ಥಾನ ಆಫ್ರಿಕದ ದೇಶಗಳ ಜೊತೆಗೆ ಭಾರತ ಸೇರಿದೆ.

ಕೆನಡ, ಬ್ರಿಟನ್, ಅಮೇರಿಕ, ಅನಂತರದ ಸ್ಥಾನ ಪಡೆದಿವೆ. ಆಫ್ರಿಕದ ದೇಶಗಳಲ್ಲಿ ಇತರ ಎಲ್ಲಾ ದೇಶಗಳಿಗಿಂತ ಸಂಖ್ಯೆ ಹೆಚ್ಚು ವರ್ಧಿಸಿದೆ.

ನಾನು ಇದರ ಮೊದಲು ಸಹ ಅನೇಕ ಸಲ ಹೇಳಿರುವೆನು, ಕೆನಡದಲ್ಲಿ ದಫ್ತರೇ ಅತ್‌ಫಾಲ್ (ಮಕ್ಕಳ ಶಾಖೆ) ಮೂಲಕ ವಕ್‌ಫೇ ಜದೀದ್ ಚಂದಾ ಸಂಗ್ರಹಿಸಲಾಗುತ್ತಿದೆ. ಇದೇ ರೀತಿ ಲೋಕದ ಇತರ ದೊಡ್ಡ ದೇಶಗಳು ಕಾರ್ಯನಿರತರಾಗಬೇಕು. ದಫ್ತರೇ ಅತ್‌ಫಾಲ್ ಇರುವುದು ವಕ್‌ಫೇ ಜದೀದ್‌ನಲ್ಲಿ ಮಾತ್ರವಾಗಿದೆ. ತಹ್‌ರೀಕ್ ಜದೀದ್‌ನಲ್ಲಿ ಇದು ಇಲ್ಲ ಎಂದು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ.

ವಕ್‌ಫೇ ಜದೀದ್ ಚಂದಾ ನೀಡುವುದರಲ್ಲಿ ಭಾರತದ ರಾಜ್ಯಗಳು ಅನುಕ್ರಮವಾಗಿ ಈ ಕೆಳಗಿನ ಸ್ಥಾನಗಳನ್ನು ಪಡೆದಿವೆ: ಕೇರಳ, ತಮಿಳುನಾಡು, ಜಮ್ಮು ಕಾಶ್ಮೀರ ಮತ್ತು ತೆಲಂಗಾಣ, ಕರ್ನಾಟಕ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ್, ಉತ್ತರಪ್ರದೇಶ, ದೆಹಲಿ, ಮಹಾರಾಷ್ಟ್ರ.

ಚಂದಾ ವಸೂಲಾದ ಜಮಾಅತ್‌ಗಳಲ್ಲಿ ಪ್ರಥಮ ಸ್ಥಾನ ಕರುಳಾಯಿಗೆ, ಅನಂತರ ಕೋಝಿಕ್ಕೋಡ್, ಹೈದರಾಬಾದ್, ಪತ್ತಪಿರಿಯಮ್, ಖಾದಿಯಾನ್, ಕಣ್ಣೂರ್ ಟೌನ್, ಕೊಲ್ಕತ್ತ, ಸೋಲೂರ್, ಬೆಂಗಳೂರು, ಪಯಂಗಾಡಿ, ಮತ್ತು ಖುಷಿನಗರ್.

ತ್ಯಾಗ ಮಾಡಿದ ಎಲ್ಲರಿಗೂ ಅಲ್ಲಾಹನು ಸಂಪತ್ತಿನಲ್ಲೂ ಸಂತಾನದಲ್ಲೂ ಅನುಗ್ರಹ ನೀಡಲಿ. ಈ ವರ್ಷ ಕಳೆದ ವರ್ಷಕ್ಕಿಂತ ಹೆಚ್ಚು ತ್ಯಾಗ ಮಾಡುವವರಾಗಲಿ. ತ್ಯಾಗ ಮಾಡುವವರ ಸಂಖ್ಯೆ ಸಹ ವರ್ಧಿಸಲಿ – ಆಮೀನ್.

(ಕೊನೆಗೆ ಹುಝೂರ್, ಮೃತರಾದ ಜನಾಬ್ ಮುಹಮ್ಮದ್ ಅಸ್‌ಲಮ್ ಶಾದ್ ಮಂಗ್ಲ ಸಾಹೇಬ್ ಮತ್ತು ಅಹ್ಮದ್ ಶೇರ್ ಜೂಯಿಯ ಸಾಹೇಬ್ ಅವರ ಗುಣಗಳ ಬಗ್ಗೆ ಮತ್ತು ಸೇವೆಗಳ ಬಗ್ಗೆ ವಿವರಿಸಿ ಅವರ ನಮಾಝೆ ಜನಾಝ ಗಾಯಿಬ್ ಅನುಷ್ಠಿಸುವ ಬಗ್ಗೆ ಪ್ರಕಟಿಸಿದರು.)

---------------*****---------------

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 08-01-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon